ದಿನಾಂಕಃ 02-02-2019 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋದಿಸಲಾಯಿತು.

-ಃಃ ಪಾಟೀ ಸವಾಲುಃ ಶ್ರೀ ಎಸ್ ಜೆ ವಾದಿ ಪರ ವಕೀಲರಿಂದ ಃಃ -

ಈರಜ್ಜನ ಮೊದಲನೇ ಮಗ ತಿಮ್ಮಣ್ಣನಿಗೆ ಗಿರಿಯಪ್ಪ ಹಾಗು ಬಧ್ರಪ್ಪ ಇಬ್ಬರು ಮಕ್ಕಳು ಎಂದು ಹೇಳುವುದು ಸರಿ . ಸದರಿ ತಿಮ್ಮಜ್ಜ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗು ನನ್ನ ತಂದೆ ಸಹೋದರಿಯರಾದ ಪುಟ್ಟೀರಮ್ಮ , ನರಸಮ್ಮ , ಪುಟ್ಟರಂಗಮ್ಮ ಇವರು ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ ಸುಮಾರು 30 ವರ್ಷದ ಮೇಲಾಗಿದೆ ಎಂದು ಹೇಳುತ್ತಾರೆ . ಈರಜ್ಜನಿಗೆ ದಾಸಪ್ಪ 2 ನೇ ಮಗ ಇರಬಹುದು ಎಂದು ಹೇಳುತ್ತಾರೆ . ಆ ಸದರಿ ದಾಸಪ್ಪನ ಹೆಂಡತಿ ಮಕ್ಕಳು ಯಾರು ಜೀವಂತ ಇಲ್ಲ. ಅವರು ತೀರಿಕೊಂಡು ಎಷ್ಟು ದಿನ ಆಗಿದೆ ಎಂದು ನನಗೆ ಗೊತ್ತಿಲ್ಲ. ಈರಮ್ಮ ,ಗಿರಿಯಮ್ಮ ತೀರಿಕೊಂಡು ಎಷ್ಟು ದಿವಸ ಆಯಿತು ಎಂದು ನನಗೆ ಗೊತ್ತಿಲ್ಲ. ಅವರಿಗೆ ರುದ್ರಮ , ಗಿರಿಯಮ್ಮ ಎನ್ನುವ ಹೆಣ್ಣುಮಕ್ಕಳು ಇದ್ದರು . ಅವರು ತೀರಿಕೊಂಡು ಎಷ್ಟು ವರ್ಷ ಆಯಿತು ಎಂದು ಗೊತ್ತಿಲ್ಲ. ಅವರ ವಂಶಸ್ಥರ ಪೈಕಿ ರುದ್ರಮ್ಮನ ಮಗ ನರಸಿಂಹಮೂರ್ತಿ ಇವರ ಮಕ್ಕಳು ಮಂಜಮ್ಮ , ತಿಪ್ಪೆಸ್ವಾಮಿ ಜೀವಂತ ಇರುತ್ತಾರೆ . ಅವರು ಸಿರಾ ತಾಲ್ಲೂಕು ಕಡವರಹಳ್ಳಿಯಲ್ಲಿ ವಾಸ ಇರುತ್ತಾರೆ . ಈ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿದ ಬಗ್ಗೆ ಗೊತ್ತಿರುವುದಿಲ್ಲ .ಈರಜ್ಜನ 3 ನೇ ಮಗ ಈರಪ್ಪ ಆತನಿಗೆ ಒಬ್ಬನೇ ಮಗ ರಂಗಪ್ಪ ಎನ್ನುವುದು ಸರಿ . ಈರಪ್ಪನಿಗೆ ಹೆಣ್ಣುಮಕ್ಕಳು ಇದ್ದರು ಈಗ ಅವರು ಯಾರು ಜೀವಂತ ಇಲ್ಲ .ಸದರಿ ಹೆಣ್ಣುಮಕ್ಕಳು ತೀರಿಕೊಂಡು ಸುಮಾರು ಎಷ್ಟು ವರ್ಷ ಆಯಿತು ಎಂದು ಹೇಳಲಾಗುವುದಿಲ್ಲ . ಈರಪ್ಪ ಇವರು ನಾನು ಹುಟ್ಟುವ ಮೊದಲೇ ತೀರಿಕೊಂಡಿರುತ್ತಾರೆ .

ದಾವಾ ಸರ್ವೆ ನಂಃ 43 ಒಟ್ಟು 29 ಎಕರೆ 34 ಗುಂಟೆ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ . ಸದರಿ ಸ್ವತ್ತನ್ನು ಈ ಹಿಂದೆ ಈರಜ್ಜನ ಮಕ್ಕಳಾದ ತಿಮ್ಮಣ್ಣ , ದಾಸಪ್ಪ , ಈರಪ್ಪ ಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಬಾಯಿ ಮಾತಿನಲ್ಲಿ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ . ಸದರಿ ಬಾಯಿ ಮಾತಿನ ವಿಭಾಗದ ಪ್ರಕಾರ ಈರಪ್ಪನ ಮಗ ರಂಗಪ್ಪನಿಗೆ 10 ಎಕರೆ 34 ಗುಂಟೆ ಹೋಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ . ಆಗ ಸದರಿ ಸ್ವತ್ತು ಸರ್ವೆ ನಂಃ 43/1 ಎಂದು ಪೋಡು ಆಯಿತು ಎಂದರೆ ಸಾಕ್ಷಿ ಪೋಡಾಗಿತ್ತು ಆದರೆ ರಂಗಪ್ಪ ಅದನ್ನು ಮಾರಾಟ ಮಾಡಿದಾಗ 1 , 2, 3 ಎಂದು ಪೋಡಾಯಿತು ಎಂದು ಹೇಳುತ್ತಾರೆ . ಸದರಿ ಸರ್ವೆ ನಂಃ 43/1 ಇದನ್ನು ರಂಗಪ್ಪ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ .

ಈರಜ್ಜನ ಮಗ ದಾಸಪ್ಪನಿಗೆ ಸದರಿ ಬಾಯಿ ಮಾತಿನ ವಿಭಾಗದ ಪ್ರಕಾರ 9 ಎಕರೆ 22 ಗುಂಟೆ ಬಂದಿತ್ತು ಎಂದರೆ ಸಾಕ್ಷಿ ಅವರಿಗೆ ವಾಣಿವಿಲಾಸ ಕೆರೆ ಹತ್ತಿರ ಅವರಿಗೆ ಬೇರೆ ಜಮೀನು ಕೊಟ್ಟಿದ್ದರು ಎಂದು ಹೇಳುತ್ತಾರೆ . ನಾನು ತಕರಾರಿನಲ್ಲಿ ದಾಸಪ್ಪನಿಗೆ 9 ಎಕರೆ 22 ಗುಂಟೆ ಸರ್ವೆ ನಂಃ 43 ರಲ್ಲಿ ಹೋಗಿತ್ತು ಎಂದು ಹೇಳಿಲ್ಲ . ಆ ರೀತಿಯಾಗಿ ನಾನು ಹೇಳಿಲ್ಲ ಅದು ಸುಳ್ಳು ಎಂದು ಹೇಳುತ್ತಾರೆ .

ಆ ರೀತಿ ದಾಸಪ್ಪನ ಭಾಗಕ್ಕೆ ಬಂದ ಸ್ವತ್ತು ಸರ್ವೆ ನಂಃ 43/2 ಎಂದು ಪೋಡಾಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ . ಸದರಿ ಬಾಯಿ ಮಾತಿನ ಪಾಲು ವಿಭಾಗದ ಪ್ರಕಾರ ತಿಮ್ಮಣ್ಣನ ಮಕ್ಕಳಿಗೆ ಎಷ್ಟು ಎಕರೆ ಬಂದಿತ್ತು ಎಂದರೆ ಸಾಕ್ಷಿ ಎಷ್ಟು ಎಂದು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ . ಸದರಿ ತಿಮ್ಮಣ್ಣನ ಮಕ್ಕಳಿಗೆ 9 ಎಕರೆ 18 ಗುಂಟೆ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ . ದಾಸಪ್ಪನಿಗೆ ಬಾಯಿ ಮಾತಿನ ವಿಭಾಗದಲ್ಲಿ ಸರ್ವೆ ನಂಃ 43 ರಲ್ಲಿ ಹಂಚಿಕೆ ಮಾಡಿರಲಿಲ್ಲ ಸಮುದ್ರದಹಳ್ಳಿ ಜಮೀನನ್ನು ಕೊಟ್ಟಿದ್ದರು ಎಂದು ಹೇಳುತ್ತಾರೆ . ಅದರ ಸರ್ವೆ ನಂಃ 222. ಸರ್ವೆ ನಂಃ 222 ರಲ್ಲಿ ಗಿರಿಯಪ್ಪ ಹಾಗು ಬಧ್ರಪ್ಪನಿಗೂ ಕೂಡ ಭಾಗ ಬಂದಿತ್ತು . ಎಷ್ಟು ಎಕರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಬಧ್ರಪ್ಪ ಇವರು ಮಾರಾಟ ಮಾಡಿದರು ಎಂದು ಹೇಳುತ್ತಾರೆ .

ದಿಃ 1–9–1981 ರಂದು ಗಿರಿಯಪ್ಪ , ಬಧ್ರಪ್ಪ ಹಾಗು ರಂಗಪ್ಪ ಇವರು ಸರ್ವೆ ನಂಃ 222 ರಲ್ಲಿ 1 ಎಕರೆ 9 ಗುಂಟೆ ಮಾರಾಟ ಮಾಡಿದರು ಎಂದರೆ ಸಾಕ್ಷಿ ಜಂಟಿ ಖಾತೆ ಇದ್ದುದ್ದರಿಂದ ಮಾರಿರಬಹುದು ಎಂದು ಹೇಳುತ್ತಾರೆ . ಅದೇ ರೀತಿ ದಾಸಪ್ಪನ ಭಾಗಕ್ಕೆ ಬಂದ ಜಮೀನನ್ನು 22–10–1983 ರಂದು ಬಿ.ಡಿ ಹೊರಕೇರಪ್ಪ ಎಂಬುವವರಿಗೆ ಮಾರಾಟ ಮಾಡಿದರು ಎಂದರೆ ಸರಿ ಎಂದು ಹೇಳುತ್ತಾರೆ . ಅದೇ ರೀತಿ ರಂಗಪ್ಪ ಇವರು ಸರ್ವೆ ನಂಃ 222 ರಲ್ಲಿ ತಿಮ್ಮಣ್ಣ ಎನ್ನುವವರಿಗೆ 1 ಎಕರೆ 9 ಗುಂಟೆಯನ್ನು ಮಾರಾಟ ಮಾಡಿದರು ಎಂದರೆ ಸರಿ . ಸರ್ವೆ ನಂಃ 222 ಒಟ್ಟು ಎಷ್ಟು ಎಕರೆ ಗುಂಟೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಬಗ್ಗೆ ನಾನು ಕಂದಾಯ ದಾಖಲೆಗಳನ್ನು ನೋಡಿಲ್ಲ.

ಸರ್ವೆ ನಂಃ 222 ರಲ್ಲಿ ಈರಜ್ಜನ ಮೂರು ಜನ ಮಕ್ಕಳು ತಮ್ಮ ತಮ್ಮ ಭಾಗದ ಸ್ವತ್ತನ್ನು ಬೇರೆ ಬೇರೆಯವರಿಗೆ ಮಾರಾಟ ಮಾಡಿದ್ದಾರೆಂದು ಹೇಳುವುದು ಸರಿ .ದಾವಾ ಸ್ವತ್ತಿನಲ್ಲಿ ಇನ್ನೂ ಅವಶ್ಯಕ ಪಾರ್ಟಿದಾರರು ಹಕ್ಕು ಹೊಂದಿದ್ದಾರೆಂದು ತಕರಾರಿನಲ್ಲಿ ಹೇಳಿದ್ದು ಅವರು ಯಾರು ಎಂದು ಹೇಳಲಾಗುತ್ತದೆಯಾ ಎಂದು ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಹೇಳುತ್ತಾರೆ . ದಿಃ 31–1–1996 ರಲ್ಲಿ ಆದ ಪಾಲು ವಿಭಾಗ ಪತ್ರದಲ್ಲಿ ಬಧ್ರಪ್ಪನ ಹಿಸ್ಸೆಗೆ ಸರ್ವೆ ನಂಃ43/3 ರಲ್ಲಿ ಸ್ವತ್ತು ಕೊಟ್ಟಿರುತ್ತಾರೆ . ಸರ್ವೆ ನಂಃ 43/2 ರಲ್ಲಿ ಮೇಲೆ ಹೇಳಿದ ಪಾಲು ವಿಭಾಗದ ದಿನಾಂಕದಂದು ಬಧ್ರಪ್ಪನಿಗೆ ಯಾವುದೇ ಹಿಸ್ಸೆ ಕೊಟ್ಟಿಲ್ಲ .ಈ ದಾವೆಯನ್ನು ವಾದಿಗೆ ಯಾವ ಸರ್ವೆ ನಂಬರ್ ಸ್ವತ್ತುಗಳಿಗೆ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ .ಪ್ರಮಾಣ ಪತ್ರದಲ್ಲಿ ಏನು ಬರೆಸಿದ್ದೇನೆಂದು ನಾನು ಓದಿಲ್ಲದ

ಕಾರಣ ಹೇಳಲಾಗುವುದಿಲ್ಲ . ಈ ಪ್ರಕರಣದಲ್ಲಿ ತಕರಾರನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಏನು ಹೇಳಿ ಬರೆಸಿದ್ದೆನೆಂದು ನನಗೆ ಗೊತ್ತಿಲ್ಲ .

ಮುಂದುವರೆದ  ಪಾಟೀಸವಾಲುಃ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು